# ಅಳಿವಿನಂಚಿನಲ್ಲಿ ಟಾಕಿನ್



**ಹಸು ಮತ್ತು ಮೇಕೆಯ ಸಂಗಮದಂತೆ ಕಾಣಿಸುವ ಈ ಅಪರೂಪದ ಪ್ರಾಣಿಯನ್ನು ಉಳಿಸಲು ಭೂತಾನ್ ಸರ್ಕಾರ ಸಾಕಷ್ಟು ಜಾಗ್ರತೆ ವಹಿಸುತ್ತಿದೆ. ಥಿಂಪೂವಿನಲ್ಲಿರುವ ರಾಷ್ಟ್ರೀಯ ಉದ್ಯಾನವನದಲ್ಲಿ ಇತ್ತೀಚೆಗೆ 25 ಟಾಕಿನ್‌ಗಳು ನಿಗೂಢವಾಗಿ ಸತ್ತುಹೋದದ್ದು ದೊಡ್ಡ ದುರಂತವೇ.**



ಚಿತ್ರ– ಲೇಖನ: **ರಮೇಶ್ ಶೆಟ್ಟಿಗಾರ್**

ಭೌಗೋಳಿಕವಾಗಿ ಭಾರತದೊಂದಿಗೆ ಬೆಸೆದುಕೊಂಡಿರುವ ಒಂದು ಪುಟ್ಟ ರಾಷ್ಟ್ರ ಭೂತಾನ್. ಬೌದ್ಧ ಧರ್ಮವೇ ಪ್ರಧಾನವಾಗಿರುವ ಈ ದೇಶದ ಬಹುತೇಕ ಪ್ರದೇಶವು ಕಡಿದಾದ ಬೆಟ್ಟ ಕಣಿವೆ ಮತ್ತು ದಟ್ಟ ಹಸಿರು ಕಾನನದಿಂದ ತುಂಬಿದೆ. ಭೂತಾನಿನ ರಾಷ್ಟ್ರೀಯ ಪ್ರಾಣಿಯೇ ಟಾಕಿನ್.

ಗೋವಿನಂತಹ ದೇಹ ಮತ್ತು ಆಡಿನಂತಹ ತಲೆಯನ್ನು ಹೊಂದಿರುವ ಈ ಪ್ರಾಣಿಯು ಹಿಮಾಲಯದ ತಪ್ಪಲಲ್ಲಿರುವ ಎತ್ತರದ ಭೂಪ್ರದೇಶದ ಬಿದಿರು ಪೊದೆಗಳ ಮಧ್ಯೆ ಹುಲ್ಲು ಮತ್ತು ಹಸಿರೆಲೆಗಳನ್ನು ತಿಂದು ಬದುಕುತ್ತದೆ. ಸಾಮಾನ್ಯವಾಗಿ ಗುಂಪಿನಲ್ಲಿ ಸಂಚರಿಸುತ್ತದೆ. ಇದು ಹುಲ್ಲು ಮೇಯುತ್ತಿರುವಾಗ ನೋಡಿದರೆ ತಕ್ಷಣ ಹಸುವೇ ಇರಬೇಕು ಅನ್ನಿಸುತ್ತದೆ. ಆದರೆ ಟಾಕಿನ್ ತಲೆ ಎತ್ತಿ ನೋಡಿದರೆ ಅದೊಂದು ಕೊಬ್ಬಿದ ಆಡಿನ ತಳಿಯಂತೆ ಕಂಡುಬರುತ್ತದೆ.

ಬೌದ್ಧರ ನಂಬಿಕೆಯ ಪ್ರಕಾರ ಟಿಬೆಟಿನ ಲಾಮಾ, ದ್ರುಕ್ಪ ಕೊನ್ಲೇ ಎಂಬ ಮಹಾನ್ ಸಾಧಕರೊಬ್ಬರು ಟಾಕಿನ್ ಪ್ರಾಣಿಯನ್ನು ಸೃಷ್ಟಿಸಿದ್ದಾರೆ! ಆ ಬೌದ್ಧ ಲಾಮಾ ಭೂತಾನಿಗೆ ಭೇಟಿ ನೀಡಿದಾಗ ಅವರನ್ನು ನೋಡಲು ಸೇರಿದ್ದ ಸಾವಿರಾರು ಭಕ್ತರ ಸಮ್ಮುಖದಲ್ಲಿ ಒಂದು ಆಡಿನ ತಲೆಯನ್ನು ಒಂದು ಗೋವಿನ ಅಸ್ಥಿಪಂಜರಕ್ಕೆ ಜೋಡಿಸಿ ಅದರಲ್ಲಿ ಜೀವವನ್ನು ತುಂಬಿಸಿದರಂತೆ! ಆ ಪ್ರಾಣಿಯು ಮುಂಭಾಗದಲ್ಲಿ ಆಡಿನಂತೆ ಹಾಗೂ ಅದರ ಹಿಂಭಾಗದಲ್ಲಿ ದನದ ಹೋಲಿಕೆಯಿತ್ತಂತೆ. ಆ ಪ್ರಾಣಿಯ ಸಂತತಿಯನ್ನು ಟಾಕಿನ್ ಎಂದು ಜನರು ಕರೆದರಂತೆ. ಈ ಐತಿಹ್ಯದ ಹಿನ್ನೆಲೆಯಲ್ಲೇ ಭೂತಾನಿನಲ್ಲಿ ಟಾಕಿನ್ ಬಗ್ಗೆ ವಿಶೇಷವಾದ ಪೂಜ್ಯ ಭಾವನೆಯಿದೆ.

ಟಾಕಿನ್‌ಗಳು ಸಾಮಾನ್ಯವಾಗಿ ಎತ್ತರದ ಬೆಟ್ಟ ಪ್ರದೇಶದಲ್ಲೇ ಇರುವುದರಿಂದ ನಾಗರಿಕ ಜಗತ್ತಿನಲ್ಲಿ ಕಾಣಿಸಿಕೊಳ್ಳುವುದಿಲ್ಲ. ಅಲ್ಲೊಮ್ಮೆ ಇಲ್ಲೊಮ್ಮೆ ಕಾಣಸಿಕ್ಕರೂ ಗೋವಿನಂತೆ ಸಾಧುಪ್ರಾಣಿಯಾದ ಟಾಕಿನ್ ಜನರ ಸಂಪರ್ಕದಿಂದ ದೂರವಿರುತ್ತದೆ. ಆದರೆ ಅದರ ಹತ್ತಿರಕ್ಕೆ ಹೋದರೆ ಅದು ಎತ್ತಿನಂತೆ ಹಾಯುವ ಸಾಧ್ಯತೆಯಿರುತ್ತದೆ. ದಟ್ಟಕಾಡಿನಲ್ಲಿ ಇರುವುದರಿಂದ ಅದು ಹಿಮಾಲಯದ ಹುಲಿ, ಚಿರತೆಗಳಿಗೆ ಸುಲಭವಾಗಿ ಆಹಾರವಾಗುತ್ತದೆ. ಜೊತೆಗೆ ಕೆಲವರು ಅದನ್ನು ಮಾಂಸಕ್ಕಾಗಿ ಮತ್ತು ಚರ್ಮದ ಆಸೆಗಾಗಿ ಬೇಟೆಯಾಡುವುದರಿಂದ ಅದರ ಸಂತತಿಯು ಕ್ಷೀಣಿಸುತ್ತಿದೆ.

